ಸರ್ವ ಶಿಕ್ಷಣ ಅಭಿಯಾನದಲ್ಲಿ ಶಾಲಾ ಕಟ್ಟಡಗಳ ಹಣ ದುರುಪಯೋಗ

72 (395)

ಶ್ರೀ ಸುಭಾಶ್ ಆರ್.ಗುತ್ತೇದಾರ್ (ಅಳಂದ)

ಅ) ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡದ ಹಣ ದುರುಪಯೋಗ ಪಡಿಸಿಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

ಇ) ಸರ್ಕಾರದ ಹಣ ದುರುಪಯೋಗ ಪಡಿಸಿಕೊಂಡ ಶಿಕ್ಷಕರ/ ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿಯ ಕ್ರಮ ಕೈಗೊಂಡಿರುತ್ತದೆ; (ತಾಲ್ಲೂಕುವಾರು ಸಂಪೂರ್ಣ ಮಾಹಿತಿ ನೀಡುವುದು)

ಈ) ಹಣ ದುರುಪಯೋಗವಾಗದಂತೆ ಸರ್ಕಾರವು ರೂಪಿಸಿರುವ ಕಟ್ಟುನಿಟ್ಟಿನ ಕ್ರಮಗಳು ಯಾವುವು?

ಶ್ರೀ ವಿಶ್ವೇಶ್ವರಯ್ಯ ಹೆಗಡೆ ಕಾಗೇರಿ
(ಮಾನ್ಯ ಪ್ರಾಥಮಿಕ ಮತ್ತು ಶಿಕ್ಷಣ ಸಚಿವರು)

ಅ) ಬಂದಿದೆ

ಆ)

2010-11	2011-12	2012-13
29	30	15

ವಿವರವಾದ ಪಟ್ಟಿ ಲಗತ್ತಿಸಿದೆ.

ಇ) ಸರ್ವ ಶಿಕ್ಷಣ ಅಭಿಯಾನದಲ್ಲಿ ಶಾಲಾ ಕಟ್ಟಡಗಳ ಹಣ ದುರುಪಯೋಗವಾಗಿದೆಯೆಂದು ಕಂಡು ಬಂದ ಕೂಡಲೇ, ಪ್ರಾಥಮಿಕ ತನಿಖೆಯನ್ನು ಜರುಗಿಸಲು ಕ್ರಮ ವಹಿಸಿರುತ್ತದೆ. ಹಣ ದುರುಪಯೋಗಪಡಿಸಿಕೊಂಡಿರುವೆಂದು ಮೇಲ್ನೋಟಕ್ಕೆ ವ್ಯಕ್ತಿವಾದಂತಹ ತಪ್ಪಿತಸ್ಥ ಶಿಕ್ಷಕರು/ಮುಖ್ಯ ಗುರುಗಳ ವಿರುದ್ಧ 1958ರ ಸಿ.ಸಿ.ಎ. ನಿಯಮಗಳಂತೆ ಇಲಾಖಾ ವಿಚಾರಣೆಯನ್ನು ಕಾಯ್ದಿರಿಸಿ ಸೇವೆಯಿಂದ ಅಮಾನತ್ತುಪಡಿಸಲಾಗಿರುತ್ತದೆ ಪೂರ್ಣ ಪ್ರಮಾಣದ ಇಲಾಖಾ ವಿಚಾರಣೆಯನ್ನು ಕೈಗೊಂಡು, ವಿಚಾರಣಾ ವರದಿಯನ್ನು ಪಡೆದು, . ದುರುಪಯೋಗಗೊಂಡ

ಹಣವನ್ನು ತಪ್ಪಿತಸ್ಥರಿಂದ ವಸೂಲಾತಿ ಮಾಡಲು ಕ್ರಮಕೈಗೊಳ್ಳಲಾಗಿದೆ. ಶಿಕ್ಷಕರು/ಮುಖ್ಯ ಗುರುಗಳು ಎಸಗಿರುವ ಹಣ ದುರುಪಯೋಗ/ ಸಾವಬೀತಾಗಿರುವ ದುರ್ನಡತೆಗಾಗಿ ಶಿಸ್ತಿನ ಕ್ರಮದಲ್ಲಿ ಸಿಸಿಎ ನಿಯಮಗಳನ್ವಯ ದಂಡನೆಯನ್ನು ವಿಧಿಸಲಾಗಿರುತ್ತದೆ. ಹಲವು ಪ್ರಕರಣಗಳಲ್ಲಿ ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಿರುತ್ತದೆ.

ಈ) ಸರ್ವ ಶಿಕ್ಷಣ ಅಭಿಯಾನ ಕಾರ್ಯಕ್ರಮದಡಿಯಲ್ಲಿ ಶಾಲೆಯ ಎಲ್ಲಾ ಕಾಮಗಾರಿಗಳ ನಿರ್ಮಾಣಕ್ಕೆ ಸಂಬಂಧಿಸಿದಂತೆ ರಾಜ್ಯ ಯೋಜನಾ ನಿರ್ದೇಶಕರ ಕಛೇರಿಯು ಕಾಲಕಾಲಕ್ಕೆ ಮಾರ್ಗಸೂಚಿ ನೀಡಿ, ವೇಳಾ ಪಟ್ಟಿ ನಿಗದಿಪಡಿಸಿದ, 32ನೇ ಕಾರ್ಯಕಾರಿ ಸಭೆಯು ಸಿವಿಲ್ ಕಾಮಗಾರಿಗಳ ಕುರಿತಂತೆ ಶಾಲೆಗಳ ಎಸ್.ಡಿ.ಎಂ.ಸಿ.ಯು ಗುಣಮಟ್ಟವನ್ನು ಕಾಯ್ದುಕೊಳ್ಳಲು ಸೂಚಿಸಿ, ಅನುದಾನವನ್ನು 3 ಹಂತದಲ್ಲಿ 50:40:10 ರಂತೆ ಬಿಡುಗಡೆ ಮಾಡಲು ನಿರ್ಣಯಿಸಿರುತ್ತದೆ– (ನಿರ್ಣಯದ ಪ್ರತಿಯನ್ನು ಲಗತ್ತಿಸಿದೆ.) ಇದರಂತೆ ಅನುದಾನವನ್ನು 3 ಹಂತಗಳಲ್ಲಿ ಬಿಡುಗಡೆ ಮಾಡಲಾಗುತ್ತದೆ. ಮೊದಲನೇ ಕಂತಿನ ಅನುದಾನಕ್ಕೆ ಪ್ರಗತಿಯಾಗಿರುವ ಬಗ್ಗೆ ಕಾಮಗಾರಿಯ ಛಾಯಾಚಿತ್ರಗಳನ್ನು ಪಡೆಯಲಾಗುವುದು. ಬಿ.ಇ.ಓ/ಬಿ.ಆರ್.ಸಿ/ಸಿ.ಆರ್.ಪಿ ಮತ್ತು ಶಾಲಾ ಮುಖ್ಯ ಶಿಕ್ಷಕರಿಂದ ದೃಢೀಕರಣ ಬಂದ ನಂತರವೇ, ಮುಂದಿನ ಕಂತಿನ ಹಣ ಬಿಡುಗಡೆ ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು. ಪ್ರತಿ ವಾರಕ್ಕೊಮ್ಮೆ ಕಾಮಗಾರಿವಾರು ಪ್ರಗತಿ ಪರಿಶೀಲನೆ ನಡೆಸಲು ಕಟ್ಟಡ ಇಂಜಿನಿಯರ್/ಉಪನಿರ್ದೇಶಕರು/ಜಿಲ್ಲಾ ಉಪಸಮನ್ವಯಾಧಿಕಾರಿ/ಬಿ.ಇ.ಓ/ ಬಿ.ಆರ್.ಸಿ/ ಇವರುಗಳಿಗೆ ನಿರ್ದೇಶಿಸಿರುತ್ತದೆ. ಲೆಕ್ಕಪತ್ರಗಳ ಪರಿಶೋಧನೆಯನ್ನು ಕಾಲಕಾಲಕ್ಕೆ ನಡೆಸಲಾಗುತ್ತಿದೆ.

ಸರ್ವಶಿಕ್ಷಣ ಅಭಿಯಾನದಲ್ಲಿ ಶಾಲಾ ಕಟ್ಟಡಗಳ ಹಣ ದುರುಪಯೋಗವಾಗದ ಬಗ್ಗೆ ಶ್ರೀ ಮಾನ್ಯ ಶ್ರೀ ಸುಭಾಷ ಆರ್.ಗುತ್ತೇದಾರ್ (ಅಳಂದ) ಇವರ ಪ್ರಶ್ನೆ ಸಂಖ್ಯೆ: 395 ಕ್ಕೆ

ಪ್ರಶ್ನೆ & ಉತ್ತರ						
ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
1	ಬಾಗಲಕೋಟೆ	ಬಂದಿದೆ.	2	1	1	4 ಪ್ರಕರಣಗಳಲ್ಲಿ 3 ವಿಚಾರಣೆಯ ಹಂತದಲ್ಲಿವೆ. 1 ಪ್ರಕರಣದಲ್ಲಿ ಆಪಾದಿತರಿಗೆ 1 ವಾರ್ಷಿಕ ವೇತನ ಬಡ್ತಿಯನ್ನು ಸಂಚಿತ ರಹಿತವಾಗಿ ತಡೆಹಿಡಿಯಲಾಗಿದೆ.
2	ಬೆಂಗಳೂರು ಗ್ರಾಮಾಂತರ	ಯಾವುದು ಇಲ್ಲ.	0	0	0	-
3	ಬೆಂಗಳೂರು ಉತ್ತರ	ಬಂದಿದೆ	2(05-06 ಸಾಲಿನಿಂದ)	0	0	1 ಪ್ರಕರಣದಲ್ಲಿ ಶಿಕ್ಷಕರನ್ನು ಅಮಾನತ್ತು ಮಾಡಲಾಗಿದೆ. ನಂತರ 2 ಪ್ರಕರಣಗಳಲ್ಲಿ ಇಲಾಖಾ ವಿಚಾರಣೆಯನ್ನು ನಡೆಸಿದ್ದು, ಹಣ ವಸೂಲಾತಿ ಕ್ರಮವನ್ನು ಕೈಗೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ.
4	ಬೆಂಗಳೂರು-ದಕ್ಷಿಣ	ಬಂದಿದೆ	1	0	0	ಮುಖ್ಯ ಶಿಕ್ಷಕರಾದ ಶ್ರೀ ಫೈರೋಜ್ ಬಾಷಾ ರವರನ್ನು ಸೇವೆಯಿಂದ ಅಮಾನತ್ತುಗೊಳಿಸಿ, ಇಲಾಖಾ ವಿಚಾರಣೆಯನ್ನು ಕೈಗೊಂಡು ರೂ.6,11,2012/-ಗಳನ್ನು ವಸೂಲಿ ಮಾಡಲಾಗಿದೆ. ನಿಯಮಾನುಸಾರ ದಂಡನೆ ವಿಧಿಸಿರುತ್ತದೆ.

ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
5	ಬೆಳಗಾಂ	ಬಂದಿದೆ	0	1	0	ಪ್ರಾಥಮಿಕ ತನಿಖಾ ವರದಿಯನ್ನು ಬೆಳಗಾಂ ಜಿಲ್ಲಾ ಉ.ನಿ.ಕರಿಂದ ಕೇಳಿದ್ದು, ವರದಿಯನ್ನು ಪಡೆದು ಪರಿಶೀಲಿಸಿ ಕ್ರಮವನ್ನು ಕೈಗೊಳ್ಳಲಾಗುವುದು.
6	ಬಳ್ಳಾರಿ	ಯಾವುದು ಇಲ್ಲ	0	0	0	
7	ಬೀದರ್	ಬಂದಿದೆ	1	5	0	ಸಂಬಂಧಪಟ್ಟ ಮುಖ್ಯ ಗುರುಗಳು/ಶಿಕ್ಷಕರುಗಳ ಮೇಲೆ ಶಿಸ್ತಿನ ಕ್ರಮವನ್ನು ನಿಯಮಾನುಸಾರ ಜರುಗಿಸಿ ಹಣ ವಸೂಲಾತಿಗೆ ಕ್ರಮವನ್ನು ಜರುಗಿಸಲಾಗಿದೆ.
8	ಬಿಜಾಪುರ	ಬಂದಿದೆ	0	3	0	2 ಪ್ರಕರಣಗಳಲ್ಲಿ ಶಿಕ್ಷಕರನ್ನು ಅಮಾನತ್ತುಗೊಳಿಸಿ, ದುರುಪಯೋಗ ಪಡಿಸಿಕೊಂಡ ಹಣವನ್ನು ವೇತನದಲ್ಲಿ ಕಡಾವಣೆ ಮಾಡಲಾಗುತ್ತಿದೆ. 1 ಪ್ರಕರಣದಲ್ಲಿ ಬಿಜಾಪುರ ಉ.ನಿ. ಕರಿಗೆ ತನಿಖೆ ನಡೆಸಿ ವರದಿಯನ್ನು ನೀಡುವಂತೆ ಸೂಚಿಸಲಾಗಿದ್ದು, ತನಿಖಾ ವರದಿಯನ್ನು ಪಡೆದು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.
9	ಚಾಮರಾಜನಗರ	ಯಾವುದು ಇಲ್ಲ	0	0	0	–
10	ಚಿಕ್ಕಮಗಳೂರು	ಯಾವುದು ಇಲ್ಲ	0	0	0	–
11	ಚಿತ್ರದುರ್ಗ	ಯಾವುದು ಇಲ್ಲ	0	0	0	–

ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
12	ಚಿಕ್ಕಬಳ್ಳಾಪುರ	ಬಂದಿದೆ	0	2	0	ಸೇವೆಯಿಂದ ಅಮಾನತ್ತುಗೊಳಿಸಿ, ಇಲಾಖಾ ವಿಚಾರಣೆಯನ್ನು ನಡೆಸಿ ಕ್ರಮಕೈಗೊಳ್ಳುವ ಪ್ರಕ್ರಿಯೆ ಜಾರಿಯಲ್ಲಿದೆ.
13	ಚಿಕ್ಕೋಡಿ	ಯಾವುದು ಇಲ್ಲ	0	0	0	-
14	ದಕ್ಷಿಣ ಕನ್ನಡ	ಬಂದಿದೆ	6	3	4	ಸೇವೆಯಿಂದ ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆ ನಡೆಸಿ ಆರೋಪ ಸಾಬೀತಾಗಿರುವಂತೆ ಶಿಕ್ಷಕರು/ಮುಖ್ಯ ಶಿಕ್ಷಕರಿಗೆ ದಂಡನೆಯನ್ನು ವಿಧಿಸಲಾಗಿದೆ.
15	ದಾವಣಗೆರೆ	ಬಂದಿದೆ	1 (2008-09 ಸಾಲಿನ)	0	0	ಸಂಬಂಧಪಟ್ಟ ಮುಖ್ಯ ಗುರುಗಳು/ಶಿಕ್ಷಕರುಗಳ ಮೇಲೆ ಶಿಸ್ತಿನ ಕ್ರಮವನ್ನು ನಿಯಮಾನುಸಾರ ಜರುಗಿಸಿ ಹಣ ವಸೂಲಾತಿಗೆ ಕ್ರಮವನ್ನು ಜರುಗಿಸಲಾಗುತ್ತಿದೆ.
16	ಧಾರವಾಡ	ಯಾವುದು ಇಲ್ಲ	0	0	0	-
17	ಗದಗ	ಯಾವುದು ಇಲ್ಲ	0	0	0	-

ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
18	ಗುಲ್ಬರ್ಗಾ	ಬಂದಿದೆ.	1(09-10)2(10-11)	1	1	3 ಪ್ರಕರಣಗಳು (ಶಿಕ್ಷಕರು ಹಾಗೂ ಮುಖ್ಯ ಗುರುಗಳಿಗೆ ಸಿಸಿಎ ನಿಯಮ 12 ರಡಿಯಲ್ಲಿ ಆರೋಪ ಪಟ್ಟಿಯನ್ನು ಜಾರಿಮಾಡಲಾಗಿದೆ. ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದೆ. 2 ಪ್ರಕರಣದಲ್ಲಿ ಪ್ರಾಥಮಿಕ ತನಿಖೆಯನ್ನು ನಡೆಸಿ ವರದಿಯನ್ನು ನೀಡುವಂತೆ ಉ.ನಿ. ಗುಲ್ಬರ್ಗಾ ಮತ್ತು ಸ.ನಿ. ಗುಲ್ಬರ್ಗಾ ರವರಿಗೆ ತನಿಖೆಯನ್ನು ಕೈಗೊಳ್ಳಲು ಬರೆದಿದ್ದು, ವರದಿ ಪಡೆದು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.
19	ಯಾದಗಿರಿ	ಬಂದಿದೆ.	4	3	2	ಸಂಬಂಧಪಟ್ಟ ಮುಖ್ಯ ಗುರುಗಳು/ಶಿಕ್ಷಕರುಗಳ ಮೇಲೆ ಶಿಸ್ತಿನ ಕ್ರಮವನ್ನು ನಿಯಮಾನುಸಾರ ಜರುಗಿಸಿ ಹಣ ವಸೂಲಾತಿಗೆ ಕ್ರಮವನ್ನು ಜರುಗಿಸಲಾಗಿದೆ. ಹಾಗೂ ತಪ್ಪಿತಸ್ಥ ನೌಕರರಿಗೆ ನಿಯಮಾನುಸಾರ ದಂಡನೆಯನ್ನು ವಿಧಿಸಲಾಗಿದೆ.
20	ಹಾಸನ	ಬಂದಿದೆ.	0	2	0	2 ಪ್ರಕರಣದಲ್ಲಿ ಶಿಕ್ಷಕರನ್ನು ಅಮಾನತ್ತುಗೊಳಿಸಿ, ಶಿಸ್ತಿನ ಕ್ರಮದ ನಂತರ ಹಣ ವಸೂಲಾತಿ ಮಾಡಿ, ಕಟ್ಟಡ ಪೂರ್ಣಗೊಳಿಸಲಾಗುತ್ತಿದೆ.

ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
21	ಹಾವೇರಿ	ಬಂದಿದೆ.	1	0	0	ಉಪ ನಿರ್ದೇಶಕರು, ಹಾವೇರಿ ಹಾಗೂ ನೋಡಲ್ ಅಧಿಕಾರಿಯಾದ ನಿರ್ದೇಶಕರು, ಅಪರ ಆಯುಕ್ತರ ಕಛೇರಿಯಿಂದ ತನಿಖಾ ವರದಿಯನ್ನು ಕೇಳಿದೆ. ವರದಿ ಪಡೆದು ಪರಿಶೀಲಿಸಿ ಕ್ರಮಕೈಗೊಳ್ಳಲಾಗುವುದು.
22	ಕೊಡಗು	ಬಂದಿದೆ.	1	0	0	ಮುಖ್ಯ ಶಿಕ್ಷಕರ ವಿರುದ್ಧ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಿದ್ದು, ಶಿಸ್ತಿನ ಕ್ರಮ ಜರುಗಿಸಲು ಕ್ರಮಕೈಗೊಳ್ಳಲಾಗಿದೆ.
23	ಕೋಲಾರ	ಯಾವುದು ಇಲ್ಲ	0	0	0	–
24	ಕೊಪ್ಪಳ	ಬಂದಿದೆ.	0	1	0	ಮುಖ್ಯ ಗುರುಗಳ ನಿವೃತ್ತಿ ವೇತನದಲ್ಲಿ ಕಡಿತ ಮಾಡುವ ಕ್ರಮಕೈಗೊಳ್ಳಲಾಗಿದೆ.
25	ಮಂಡ್ಯ	ಬಂದಿದೆ.	0	1	0	ಮುಖ್ಯ ಶಿಕ್ಷಕಿ ಹಾಗೂ ಎಸ್.ಡಿ.ಎಂ.ಸಿ ಅಧ್ಯಕ್ಷರ ಮೇಲೆ ಕ್ರಿಮಿನಲ್ ಮೊಕದ್ದಮೆಯನ್ನು ಹೂಡಲಾಗಿದ್ದು. ಜೆ.ಎಂ.ಎಫ್.ಸಿ. ನ್ಯಾಯಾಲಯದಲ್ಲಿ ವಿಚಾರಣೆಯು ಪ್ರಗತಿಯ ಹಂತದಲ್ಲಿದೆ.
26	ಮೈಸೂರು	ಯಾವುದು ಇಲ್ಲ	0	0	0	–
27	ರಾಮನಗರ	ಯಾವುದು ಇಲ್ಲ	0	0	0	–

ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
28	ರಾಯಚೂರು	ಬಂದಿದೆ.	2	5	3	10 ಪ್ರಕರಣಗಳಲ್ಲಿ ಮುಖ್ಯ ಗುರುಗಳನ್ನು ಸೇವೆಯಿಂದ ಅಮಾನತ್ತುಗೊಳಿಸಿದೆ. ಇಲಾಖಾ ವಿಚಾರಣೆಯು ಪ್ರಗತಿಯಲ್ಲಿದೆ. ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದೆ.
29	ಶಿವಮೊಗ್ಗ	ಬಂದಿದೆ.	1	–	4	5 ಪ್ರಕರಣಗಳಲ್ಲಿ ನೌಕರರನ್ನು ಸೇವೆಯಿಂದ ಅಮಾನತ್ತುಗೊಳಿಸಿ ಇಲಾಖಾ ವಿಚಾರಣೆಯನ್ನು ನಡೆಸಲಾಗಿದೆ. ಇದರಲ್ಲಿ 2 ಪ್ರಕರಣದಲ್ಲಿ ದುರುಪಯೋಗದ ಹಣ ವಸೂಲಾತಿ ಮಾಡಲಾಗಿದೆ ಜೊತೆಗೆ ವಾರ್ಷಿಕ ವೇತನ ಬಡ್ತಿಯನ್ನು ತಡೆಹಿಡಿಯುವ ದಂಡನೆಯನ್ನು ವಿಧಿಸಿರುತ್ತದೆ.
30	ತುಮಕೂರು	ಯಾವುದು ಇಲ್ಲ	0	0	0	–
31	ಮಧುಗಿರಿ	ಬಂದಿದೆ.	0	2	0	ಸಂಬಂಧಿಸಿದ ಶಿಕ್ಷಕರುಗಳನ್ನು ಸೇವೆಯಿಂದ ಅಮಾನತ್ತಿನಲ್ಲಿರಿಸಿ, ಇಲಾಖಾ ವಿಚಾರಣೆ ನಡೆಸಲಾಗುತ್ತಿದ್ದು, ವಿಚಾರಣೆಯ ವರದಿಯನ್ನು ಪರಿಶೀಲಿಸಿದ ನಂತರ ಅಂತಿಮ ಕ್ರಮವನ್ನು ಕೈಗೊಳ್ಳಲಾಗುವುದು.
32	ಉಡುಪಿ	ಯಾವುದು ಇಲ್ಲ	0	0	0	–

ಕ್ರ ಸಂ	ಜಿಲ್ಲೆಗಳ ಹೆಸರು	ರಾಜ್ಯದಲ್ಲಿ ಪ್ರಾಥಮಿಕ ಶಾಲೆಯಲ್ಲಿ ಸರ್ವ ಶಿಕ್ಷಣ ಅಭಿಯಾನದ ಶಾಲಾ ಕೋಣೆಗಳ ಕಟ್ಟಡ ಹಣ ದುರುಪಯೋಗಪಡಿಸಿಕೊಂಡಿರುವ ಸರ್ಕಾರದ ಗಮನಕ್ಕೆ ಬಂದಿದೆಯೇ?	ಕಳೆದ ಮೂರು ವರ್ಷಗಳಲ್ಲಿ ರಾಜ್ಯದಲ್ಲಿ ನಡೆದಿರುವ ಇಂತಹ ಪ್ರಕರಣಗಳು ಎಷ್ಟು			ಸರ್ಕಾರದ ಹಣ ದುರುಪಯೋಗಪಡಿಸಿಕೊಂಡ ಶಿಕ್ಷಕರ/ಮುಖ್ಯ ಗುರುಗಳ ಮೇಲೆ ಸರ್ಕಾರ ಯಾವ ರೀತಿ ಕ್ರಮಕೈಗೊಂಡಿರುತ್ತದೆ
			2010-11	2011-12	2012-13	
33	ಉತ್ತರ ಕನ್ನಡ	ಬಂದಿದೆ.	1	0	0	ಮುಖ್ಯೋಪಾಧ್ಯಯರನ್ನು ಅಮಾನತ್ತು ಪಡಿಸಿರುತ್ತದೆ. ಹಾಗೂ ಕ್ರಿಮಿನಲ್ ಮೊಕದ್ದಮೆಯನ್ನು ಸಹ ದಾಖಲಿಸಿದೆ. ಕಾಮಗಾರಿಯನ್ನು ಪ್ರಾರಂಭಿಸಲಾಗಿದೆ.
34	ಸಿರಸಿ	ಬಂದಿದೆ.	3	0	0	2 ಪ್ರಕರಣದಲ್ಲಿ ಶಾಲೆಯ ಶಿಕ್ಷಕ/ಮುಖ್ಯಗುರುಗಳನ್ನು ಅಮಾನತ್ತು ಮಾಡಲಾಗಿದೆ. ಕ್ರಿಮಿನಲ್ ಮೊಕದ್ದಮೆಯನ್ನು ದಾಖಲಿಸಲಾಗಿದೆ. 1 ರಲ್ಲಿ ಶಿಸ್ತಿನ ಕ್ರಮವನ್ನು ಕೈಗೊಂಡಿದ್ದು, ಇಲಾಖಾ ವಿಚಾರಣೆಗಳು ಪ್ರಗತಿಯಲ್ಲಿವೆ.
ಒಟ್ಟು			29	30	15	